## ಹೆಚ್ಚುವರಿ ಸಿವಿಲ್ ಜಡ್ಜ್ ಮತ್ತು ಜೆ.ಎಂ.ಎಫ್.ಸಿ ನ್ಯಾಯಾಲಯ, ಹೊನ್ನಾಳಿ

ಸಿ.ಸಿ.1354/2021

ಸಾಕ್ಷಿದಾರರ ಹೇಳಿಕೆಃ

| | | | | |
|---|---|---|---|---|
| ಹೆಸರು | : | ಕೆ. ಮಂಜಪ್ಪ | CW: 7 | PW: 7 |
| ತಂದೆಯ ಹೆಸರು | : | ಕೆಂಚಪ್ಪ | | |
| ವಯಸ್ಸು | : | 47 | | |
| ವೃತ್ತಿ | : | ಹೆಚ್ ಸಿ, ನ್ಯಾಮತಿ ಪೋಲೀಸ್ ಠಾಣೆ | | |
| ವಾಸಸ್ಥಳ | : | ನ್ಯಾಮತಿ | | |

ದಿನಾಂಕಃ 06.02.2026 ರಂದು ಸಾಕ್ಷಿಯನ್ನು ಕರೆದು ಪ್ರಮಾಣವಚನ ಭೋಧಿಸಲಾಯಿತು.

ಮುಖ್ಯವಿಚಾರಣೆಃ ಮಾನ್ಯ ಸ.ಸ.ಅ.ರವರಿಂದಃ-

ನಾನು 2018 ರಿಂದ ಇಲ್ಲಿಯವರೆಗೆ ನ್ಯಾಮತಿ ಪೊಲೀಸ್ ಠಾಣೆಯಲ್ಲಿ ಹೆಚ್ ಸಿ ಆಗಿ ಕರ್ತವ್ಯ ನಿರ್ವಹಿಸುತ್ತಿದ್ದೇನೆ.

ದಿಃ 24.04.2021 ರಂದು ಚಾಸಾ 1 ರವರು ನನ್ನನ್ನು, ಚಾಸಾ 1, 8 ರಿಂದ 10 ರವರನ್ನು ಅಕ್ರಮ ಮಧ್ಯ ಮಾರಾಟ ಮಾರುತ್ತಿರುವ ನಾಗರಾಜ್ ರವರ ಮೇಲೆ ದಾಳಿ ನಡೆಸಲು ಹೋಗೋಣ ಎಂದು ತಿಳಿಸಿ ಚಾಸಾ 2 ರವರು ನನಗೂ, ಚಾಸಾ 1, 8 ರಿಂದ 10 ರವರಿಗೆ ದಾಳಿಗೆ ಹೋಗಲು ಸೂಚಿಸಿ ನನಗೆ ಇಬ್ಬರು ಪಂಚರನ್ನು ಕರೆದುಕೊಂಡು ಬರುವಂತೆ ತಿಳಿಸಿದ್ದು ಅದರಂತೆ ನಾನು

ಸುರಹೊನ್ನೆ ಸರ್ಕಲ್ ಬಳಿ ಹೋಗಿ ಚಾಸಾ 3 ಮತ್ತು 4 ರವರನ್ನು ಕರೆದುಕೊಂಡು ಠಾಣೆಗೆ ಹೋಗಿರುತ್ತೇನೆ. ಚಾಸಾ 3 ಮತ್ತು 4 ರವರಿಗೆ ಚಾಸಾ 2 ರವರು ದಾಳಿ ಬಗ್ಗೆ ಮಾಹಿತಿ ನೀಡಿ ಪಂಚರಾಗಿ ಬರುವಂತೆ ಕೇಳಿಕೊಂಡಿದ್ದು ಅದರಂತೆ ಚಾಸಾ 3 ಮತ್ತು 4 ರವರು ಒಪ್ಪಿಕೊಂಡಿರುತ್ತಾರೆ. ಸಂಜೆ 6.50 ಗಂಟೆಗೆ ನಾನು, ಚಾಸಾ 1 ರಿಂದ 4, 8 ರಿಂದ 10 ರವರು ಜಯನಗರದ ಗ್ರಾಮಕ್ಕೆ ಇಲಾಖಾ ಜೀಪಿನಲ್ಲಿ ಹೋಗಿ ವೆಂಕಟೇಶಪ್ಪ ಭೋವಿರವರ ಮನೆಯ ಹತ್ತಿರ ಜೀಪನ್ನು ನಿಲ್ಲಿಸಿ ಕೆಳಗೆ ಇಳಿದು ನೋಡಲಾಗಿ ಸಾರ್ವಜನಿಕ ರಸ್ತೆಯಲ್ಲಿ ಮಧ್ಯ ಮಾರಾಟ ಮಾಡುತ್ತಿದ್ದ ವ್ಯಕ್ತಿಯು ಸಮುಸ್ತ್ರದಲ್ಲಿದ್ದ ನಮ್ಮನ್ನು ನೋಡಿ ಹೊಸಜೋಗಕ್ಕೆ ಓಡಿಹೋದ. ನಾವು ಬೆನ್ನಟ್ಟಿದರೂ ಸಹ ಹಿಡಿಯಲು ನಮಗೆ ಆಗಲಿಲ್ಲ. ಓಡಿಹೋದ ವ್ಯಕ್ತಿಯ ಬಗ್ಗೆ ಚಾಸಾ 2 ರವರು ಚಾಸಾ 5 ಮತ್ತು 6 ರವರನ್ನು ವಿಚಾರಿಸಿದಾಗ ಓಡಿಹೋದ ವ್ಯಕ್ತಿಯ ಹೆಸರು ನಾಗರಾಜ ತಂದೆ ಈರಪ್ಪ, ಜಯನಗರ ಗ್ರಾಮ ಎಂದು ಹಾಗೂ ಕಳೆದ 3-4 ದಿನಗಳಿಂದ ಪರವಾನಗೆ ಇಲ್ಲದೇ ಅಕ್ರಮ ಮಧ್ಯ ಮಾರಾಟ ಮಾಡುತ್ತಿದ್ದಾನೆ ಎಂದು ತಿಳಿಸಿರುತ್ತಾರೆ.

ಸ್ಥಳದಲ್ಲಿದ್ದ ಒರಿಜಿನಲ್ ಚಾಯ್ಸ್ ಡಿಲಕ್ಸ್ ವಿಸ್ಕಿ 90 ಎಂ ಎಲ್ ನ 88 ಪೌಚ್ ಗಳು ಅದರ ಮೇಲೆ ಸ್ಟಿಕ್ಕರ್ ಇರುವುದಿಲ್ಲ ಹಾಗೂ 150 ರೂ.ಗಳನ್ನು ಸದರಿ ವ್ಯಕ್ತಿಯು ಬಿಸಾಡಿ ಹೋಗಿದ್ದು ಅವುಗಳನ್ನು ಪಂಚರ ಸಮಕ್ಷಮ ಬಿಳಿ ಬಟ್ಟೆಯಲ್ಲಿ ಪ್ಯಾಕ್ ಮಾಡಿ ದಾರದಿಂದ ಹೊಲೆದು ಎನ್. ಎಂ.ಟಿ ಎಂದು ಅರಗು ಸೀಲ್ ಹಾಕಿ ರಟ್ಟಿನ ಬಾಕ್ಸ್ ನಲ್ಲಿ ಹಾಕಿ ವಶಪಡಿಸಿಕೊಂಡಿರುತ್ತೇವೆ. ಸಂಜೆ 7.30 ರಿಂದ 8.30 ರ ಸಮಯದಲ್ಲಿ ಪಂಚನಾಮೆ ಜರುಗಿಸಿ, ಪೋಟೋಗಳನ್ನು ತೆಗೆಸಿರುತ್ತೇವೆ. ಚಾಸಾ 13 ರವರಿಗೆ ಹೇಳಿಕೆ ನೀಡಿರುತ್ತೇನೆ.

ಸಾಕ್ಷಿಯು ನ್ಯಾಯಾಲಯದ ಮುಂದಿರುವ ಆರೋಪಿಯನ್ನು ನೋಡಿ ಗುರುತಿಸಿರುತ್ತಾರೆ. ಸಾಕ್ಷಿಯು ನ್ಯಾಯಾಲಯದ ಮುಂದಿರುವ ಮು.ಮಾ 1 ನ್ನು ನೋಡಿ ಗುರುತಿಸಿರುತ್ತಾರೆ. ಮು.ಮಾ 2 ಟ್ರೆಷರಿ ಬಾಕ್ಸ್ ನಲ್ಲಿದ್ದು ಅದರ ಗುರುತಿಸುವಿಕೆಗೆ ಆರೋಪಿ ಪರ ವಕೀಲರು ತಕರಾರು ಇಲ್ಲ ಎಂದು ತಿಳಿಸಿರುತ್ತಾರೆ.

ಸಾಕ್ಷಿಯು ನಿಪಿ 2 ಸ್ಥಳ ಪಂಚನಾಮೆ ನೋಡಿ ಗುರುತಿಸಿದ್ದು ಸಾಕ್ಷಿಯ ಸಹಿಯನ್ನು ನಿಪಿ 2(ಇ) ಎಂದು ಗುರುತಿಸಲಾಯಿತು. ಸಾಕ್ಷಿಯು ನಿಪಿ 3 ಮತ್ತು 4 ಪೋಟೋಗಳನ್ನು ನೋಡಿ ಗುರುತಿಸಿರುತ್ತಾರೆ.

ಪಾಟೀ ಸವಾಲುಃ- ಆರೋಪಿ ಪರ ಶ್ರೀ.ಎಂ ಕೆ ಹೆಚ್ ವಕೀಲರಿಂದಃ-

ಚಾಸಾ 1, 2, 8 ರಿಂದ 11 ಮತ್ತು 13 ರವರು ನಮ್ಮ ಇಲಾಖೆಯವರು ಎಂದರೆ ಸರಿ. ಮಧ್ಯ ಮಾರಾಟದ ಮಾಹಿತಿ ಚಾಸಾ 1 ರವರಿಗೆ ಯಾವ ಸಮಯಕ್ಕೆ ಬಂದಿರುತ್ತದೆ ಎಂದರೆ ಸಂಜೆ 6.30 ಗಂಟೆಗೆ. ಚಾಸಾ 1 ರವರಿಗೆ ಮಧ್ಯ ಮಾರಾಟದ ಮಾಹಿತಿ ಬಂದಾಗ ಅವರು ಎಲ್ಲಿದ್ದರು ಎಂದರೆ ಪೊಲೀಸ್ ಠಾಣೆಯಲ್ಲಿ ಎಂದು ನುಡಿಯುತ್ತಾರೆ. ಕೃತ್ಯ ಸ್ಥಳಕ್ಕೂ ಪೊಲೀಸ್ ಠಾಣೆಗೂ ಎಷ್ಟು ದೂರ ಇದೆ ಎಂದರೆ 25 ಕಿ.ಮೀ. ಠಾಣೆಯಿಂದ ಕೃತ್ಯ ನಡೆದ ಸ್ಥಳಕ್ಕೆ ಹೋಗಲು ಎಷ್ಟು ಸಮಯ ಬೇಕಾಗುತ್ತದೆ ಎಂದರೆ ಅಂದಾಜು 30 ನಿಮಿಷ ಎಂದು ನುಡಿಯುತ್ತಾರೆ. ಯಾವ ಮಾರ್ಗವಾಗಿ ಠಾಣೆಯಿಂದ ಕೃತ ನಡೆದ ಸ್ಥಳಕ್ಕೆ ಹೋಗಿರುತ್ತೇವೆ ಎಂದರೆ ಸಾಲಬಾಳು-ಸವಳಂಗ-ಮಾಚಗೊಂಡನಹಳ್ಳಿ-ಚಿನ್ನಿಕಟ್ಟೆ-ಬಿದರಹಳ್ಳಿ-ಸಿದ್ದಾಪುರ-ಹಳೇಜೋಗ-ಹೊಸಜೋಗ-ಜಯನಗರ ಎಂದು ನುಡಿಯುತ್ತಾರೆ. ಪೋಲೀಸ್ ಠಾಣೆ ಮತ್ತು ಜಯನಗರ ಗ್ರಾಮದ ಮಧ್ಯೆ ಮೇಲೆ ಹೇಳಿದ ಹಳ್ಳಿಗಳು ಬರುತ್ತವೆ ಎಂದು ನಿಪಿ 2 ಪಂಚನಾಮೆಯಲ್ಲಿ ಬರೆಸಿಲ್ಲ ಎಂದರೆ ಸರಿ.

ದಾಳಿಗೆ ಹೋಗಿದ್ದವರಲ್ಲಿ ಯಾರು ಮೊದಲು ಅಕ್ರಮ ಮಧ್ಯ ಮಾರಾಟ ಮಾಡುತ್ತಿದ್ದಂತಹ ವ್ಯಕ್ತಿಯನ್ನು ನೋಡಿರುತ್ತಾರೆ ಎಂದರೆ ಚಾಸಾ 2 ರವರು. ಸದರಿ ವ್ಯಕ್ತಿಯನ್ನು ನಾನು ಎಷ್ಟು ಅಡಿ ದೂರದಿಂದ ನೋಡಿರುತ್ತೇನೆ ಎಂದರೆ ಸಾಕ್ಷಿಯು 50 ಮೀ. ಎಂದು ನುಡಿಯುತ್ತಾರೆ. ಮು.ಮಾ 1 ಮಧ್ಯದ ಪೌಚ್ ಗಳ ತಯಾರಿಸಿದ ಮತ್ತು ಮುಕ್ತಾಯದ ದಿನಾಂಕ, ಯಾವ ರಾಜ್ಯಕ್ಕೆ ಸಂಬಂಧಿಸಿದೆ ಎಂದು ನಿಪಿ 2 ಪಂಚನಾಮೆಯಲ್ಲಿ ತಿಳಿಸಿಲ್ಲ ಎಂದರೆ ಸರಿ. ಆರೋಪಿ ಮಧ್ಯ ಮಾರಾಟ ಮಾಡುತ್ತಿರುವುದನ್ನು ಪೋಟೋ ಆಗಲೀ, ವಿಡಿಯೋ ಆಗಲೀ ತೆಗೆದುಕೊಂಡಿದ್ದೀರಾ ಎಂದರೆ ಇಲ್ಲ. ರಟ್ಟಿನ ಬಾಕ್ಸ್ ನ್ನು ಮು.ಮಾ ಗಳಲ್ಲಿ ಸೇರಿಸಿಲ್ಲ ಎಂದರೆ ಸರಿ. ಘಟನಾ ದಿನಾಂಕದಂದು ಯಾವ ಯಾವ ಗ್ರಾಮಗಳಲ್ಲಿ ಗಸ್ತು ಮಾಡಿರುತ್ತೇವೆ ಎಂದರೆ ಸಾಕ್ಷಿಯು ಜಯನಗರ ಎಂದು ನುಡಿಯುತ್ತಾರೆ.

ದಿಃ 24.04.2021 ರಂದು ಚಾಸಾ 1 ರವರು ನನ್ನನ್ನು, ಚಾಸಾ 1, 8 ರಿಂದ 10 ರವರನ್ನು ಅಕ್ರಮ ಮಧ್ಯ ಮಾರಾಟ ಮಾರುತ್ತಿರುವ ನಾಗರಾಜ್ ರವರ ಮೇಲೆ ದಾಳಿ ನಡೆಸಲು ಹೋಗೋಣ ಎಂದು ತಿಳಿಸಿ ಚಾಸಾ 2 ರವರು ನನಗೂ, ಚಾಸಾ 1, 8 ರಿಂದ 10 ರವರಿಗೆ ದಾಳಿಗೆ ಹೋಗಲು ಸೂಚಿಸಿ ನನಗೆ ಇಬ್ಬರು ಪಂಚರನ್ನು ಕರೆದುಕೊಂಡು ಬರುವಂತೆ ತಿಳಿಸಿದ್ದು ಅದರಂತೆ ನಾನು ಸುರಹೊನ್ನೆ ಸರ್ಕಲ್ ಬಳಿ ಹೋಗಿ ಚಾಸಾ 3 ಮತ್ತು 4 ರವರನ್ನು ಕರೆದುಕೊಂಡು ಠಾಣೆಗೆ ಹೋಗಿರುತ್ತೇನೆ ಎಂದು ಸುಳ್ಳು ಹೇಳುತ್ತಿದ್ದೇನೆಂದರೆ ಸರಿಯಲ್ಲ. ಚಾಸಾ 3 ಮತ್ತು 4 ರವರಿಗೆ ಚಾಸಾ 2 ರವರು ದಾಳಿ ಬಗ್ಗೆ ಮಾಹಿತಿ ನೀಡಿ ಪಂಚರಾಗಿ ಬರುವಂತೆ ಕೇಳಿಕೊಂಡಿದ್ದು ಅದರಂತೆ ಚಾಸಾ 3 ಮತ್ತು 4 ರವರು ಒಪ್ಪಿಕೊಂಡಿರುತ್ತಾರೆ ಎಂದು ಸುಳ್ಳು ಹೇಳುತ್ತಿದ್ದೇನೆಂದರೆ ಸರಿಯಲ್ಲ. ಸಂಜೆ 6.50 ಗಂಟೆಗೆ ನಾನು, ಚಾಸಾ 1 ರಿಂದ 4, 8 ರಿಂದ 10 ರವರು ಜಯನಗರದ ಗ್ರಾಮಕ್ಕೆ ಇಲಾಖಾ ಜೀಪಿನಲ್ಲಿ ಹೋಗಿ ವೆಂಕಟೇಶಪ್ಪ ಭೋವಿರವರ ಮನೆಯ ಹತ್ತಿರ ಜೀಪನ್ನು ನಿಲ್ಲಿಸಿ ಕೆಳಗೆ ಇಳಿದು ನೋಡಲಾಗಿ ಸಾರ್ವಜನಿಕ ರಸ್ತೆಯಲ್ಲಿ ಮಧ್ಯ ಮಾರಾಟ ಮಾಡುತ್ತಿದ್ದ ವ್ಯಕ್ತಿಯು ಸಮುಸ್ತ್ರದಲ್ಲಿದ್ದ ನಮ್ಮನ್ನು ನೋಡಿ ಹೊಸಜೋಗಕ್ಕೆ ಓಡಿಹೋದ ಎಂದು ಸುಳ್ಳು ಹೇಳುತ್ತಿದ್ದೇನೆಂದರೆ ಸರಿಯಲ್ಲ. ನಾವು ಬೆನ್ನಟ್ಟಿದರೂ ಸಹ ಹಿಡಿಯಲು ನಮಗೆ ಆಗಲಿಲ್ಲ ಎಂದು ಸುಳ್ಳು ಹೇಳುತ್ತಿದ್ದೇನೆಂದರೆ ಸರಿಯಲ್ಲ. ಓಡಿಹೋದ ವ್ಯಕ್ತಿಯ ಬಗ್ಗೆ ಚಾಸಾ 2 ರವರು ಚಾಸಾ 5 ಮತ್ತು 6 ರವರನ್ನು ವಿಚಾರಿಸಿದಾಗ ಓಡಿಹೋದ ವ್ಯಕ್ತಿಯ ಹೆಸರು ನಾಗರಾಜ ತಂದೆ ಈರಪ್ಪ, ಜಯನಗರ ಗ್ರಾಮ ಎಂದು ಹಾಗೂ ಕಳೆದ 3-4 ದಿನಗಳಿಂದ ಪರವಾನಗೆ ಇಲ್ಲದೇ ಅಕ್ರಮ ಮಧ್ಯ ಮಾರಾಟ ಮಾಡುತ್ತಿದ್ದಾನೆ ಎಂದು ತಿಳಿಸಿರುತ್ತಾರೆ ಎಂದು ಸುಳ್ಳು ಹೇಳುತ್ತಿದ್ದೇನೆಂದರೆ ಸರಿಯಲ್ಲ.

ಸ್ಥಳದಲ್ಲಿದ್ದ ಒರಿಜಿನಲ್ ಚಾಯ್ಸ್ ಡಿಲಕ್ಸ್ ವಿಸ್ಕಿ 90 ಎಂ ಎಲ್ ನ 88 ಪೌಚ್ ಗಳು ಅದರ ಮೇಲೆ ಸ್ಟಿಕ್ಕರ್ ಇರುವುದಿಲ್ಲ ಹಾಗೂ 150 ರೂ.ಗಳನ್ನು ಸದರಿ ವ್ಯಕ್ತಿಯು ಬಿಸಾಡಿ ಹೋಗಿದ್ದು ಅವುಗಳನ್ನು ಪಂಚರ ಸಮಕ್ಷಮ ಬಿಳಿ ಬಟ್ಟೆಯಲ್ಲಿ ಪ್ಯಾಕ್ ಮಾಡಿ ದಾರದಿಂದ ಹೊಲೆದು ಎನ್. ಎಂ.ಟಿ ಎಂದು ಅರಗು ಸೀಲ್ ಹಾಕಿ ರಟ್ಟಿನ ಬಾಕ್ಸ್ ನಲ್ಲಿ ಹಾಕಿ ವಶಪಡಿಸಿಕೊಂಡಿರುತ್ತೇವೆ ಎಂದು ಸುಳ್ಳು ಹೇಳುತ್ತಿದ್ದೇನೆಂದರೆ ಸರಿಯಲ್ಲ. ಸಂಜೆ 7.30 ರಿಂದ 8.30 ರ ಸಮಯದಲ್ಲಿ ಪಂಚನಾಮೆ

ಜರುಗಿಸಿ, ಫೋಟೋಗಳನ್ನು ತೆಗೆಸಿರುತ್ತೇವೆ ಎಂದು ಸುಳ್ಳು ಹೇಳುತ್ತಿದ್ದೇನೆಂದರೆ ಸರಿಯಲ್ಲ. ಚಾಸಾ 13 ರವರಿಗೆ ಹೇಳಿಕೆ ನೀಡಿರುತ್ತೇನೆ ಎಂದು ಸುಳ್ಳು ಹೇಳುತ್ತಿದ್ದೇನೆಂದರೆ ಸರಿಯಲ್ಲ.

ಮರುವಿಚಾರಣೆ ಇಲ್ಲ.

ಸಾ. ಹೇ. ತೆ. ನ್ಯಾ. ಬೆ. ಮಾಡಿಸಲಾಯಿತು.

ಓ. ಹೇ. ಕೇ. ಸ. ಇದೆ.

ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು
ಜೆ.ಎಂ.ಎಫ್.ಸಿ., ಹೊನ್ನಾಳಿ.